## ಸನ್ಯಾಸಿ ಹೊಲ



ವೃತ್ತಿ ನಿಮಿತ್ತ ಭೂಮಾಪನ(ಹೊಲ ಅಳೆಯಲು) ಮಾಡಲು ಒಂದೂರಿಗೆ ಹೋಗಿದ್ದೆವು. ನಾವು ದಾರಿಯಲ್ಲಿ ಹೋಗುವಾಗ, 'ಯಾವ ಹೊಲ ಅಳೆಯಲು ಬಂದಾರ?' ಅಂತ ಮಂದಿ ಕೇಳುತ್ತಿದ್ದರು. ಅರ್ಜಿ ತುಂಬಿದ ರೈತ, 'ಸನ್ಯಾಸಿ ಹೊಲ' ಅಂತ ಉತ್ತರಿಸುತ್ತಿದ್ದ. ನಾನು ಕುತೂಹಲದಿಂದ 'ಸನ್ಯಾಸಿ ಹೊಲ' ಅಂದ್ರ? ಸನ್ಯಾಸಿ ಕಡೆಯಿಂದ ಹೊಲ ಖರೀದಿ ಮಾಡಿರಿ? ಅಂತ ಕೇಳಿದೆ. ರೈತ ನಕ್ಕು, 'ಇಲ್ಲ ಸರ್, ಈಗ ಅಳೆಯಲು ಹೋಗುವ ಹೊಲ ಮಳೆ ಜಾಸ್ತಿ ಬಂದರೂ, ಕಡಿಮೆ ಬಂದರೂ ಏನೂ ಫಸಲು ನೀಡುವದಿಲ್ಲ. ಹಾಗಾಗಿ ಸನ್ಯಾಸಿ ಥರ ಎಲ್ಲದರ ಮೇಲೆ ಆಸೆ ಬಿಟ್ಟು, ಫಲ ಆಪೇಕ್ಷಿಸಲು ಯೋಗ್ಯವಲ್ಲದ ಹೊಲ ಅಂತ ಇದನ್ನು ಸನ್ಯಾಸಿ ಹೊಲ ಅಂತೀವಿ' ಅಂದ. ಹೊಲ ಅಳೆಯಲು ಇಳಿದಾಗ ಒಂದು ಅಡಿಯ ತನ ಕೆಸರಿತ್ತು, ಬೆಳೆಯ ಅವಶೇಷಗಳೂ ಕಾಣಲಿಲ್ಲ. ಹೌದು ಆ ರೈತ ಹೇಳಿದ್ದು ಖರೆ ಅನಿಸಿತು.

**ನರಸಿಂಹಾರೆಡ್ಡಿ ಯಂಕಾಮೋಳ**

---



ಕಲೆ: ಗಣೇಶ ಆಚಾರ್ಯ

## ಗ್ರೀಸ್ ಚಾಕಲೇಟ್..!

'ಅಪ್ಪ, ಸಿದ್ಧರಾಮ ಹಿರೇಮಠ್ ಅಂಕಲ್ ಗ್ರೀಸ್ ಚಾಕಲೇಟ್ ಕೊಟ್ಟಿದಾರೆ. ಥೀ... ನನಗಂತೂ ಬೇಡಪ್ಪ' ಅಂತಾ ಹೇಳುತ್ತಾ ಮಗಳು ಸ್ವಸ್ತಿ ಸಿಲ್ವರ್ ಕಲರ್ ಕವರ್‌ನಲ್ಲಿದ್ದ ಅಷ್ಟೂ ಚಾಕಲೇಟ್‌ಗಳನ್ನು ಕೈಗಿಟ್ಟಳು. ನಾನೂ ಅವಕ್ಕಾದೆ. ಅಳುಕಿನಿಂದಲೇ ಅವುಗಳನ್ನೆಲ್ಲ ಎಡಗೈಯಲ್ಲಿ ಹಿಡಿದು ಹಿರೇಮಠ್ ಸರ್‌ಗೆ ಬಲಗೈಯಿಂದ ಫೋನ್ ಹಚ್ಚಿ ಮಗಳು ಹೇಳಿದ್ದನ್ನು ಒಪ್ಪಿಸಿದೆ. ಅದಕ್ಕವರು 'ನನ್ನ ಮಗಳು ಅಪೂರ್ವ ತನ್ನ ಕಂಪನಿ ಕಡೆಯಿಂದ ಗ್ರೀಸ್ ದೇಶಕ್ಕೆ ಟ್ರೈನಿಂಗ್ ಹೋಗಿದ್ದಳು. ಬರುವಾಗ ಚಾಕಲೇಟ್ ತಂದಿದ್ದಳು. ಅದಕ್ಕೇ ಗ್ರೀಸ್ ಚಾಕಲೇಟ್ ಅಂತಾ ಹೇಳಿ ಕೊಟ್ಟಿದ್ದೆ' ಅಂದರು!.

**ಸ್ವರೂಪಾನಂದ ಕೊಟ್ಟೂರು**